**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

ಸ್ಪೆಷಲ್ ಕೇಸ್ ನಂಃ 58/2023 ಪಿ.ಡಬ್ಲ್ಯೂಃ 2

ಸಿ.ಡಬ್ಲ್ಯೂಃ 6

| | |
|---|---|
| ಸಾಕ್ಷಿದಾರರ ಹೆಸರು | ರಾಯೇಶ್ ಪೈ |
| ತಂದೆಯ ಹೆಸರು | ದಿಃ ವಿಶ್ವನಾಥ ಪೈ |
| ವಯಸ್ಸು | 49 ವರ್ಷ |
| ಉದ್ಯೋಗ | ಕೃಷಿ |
| ವಿಳಾಸ | ಪಲಿಮಾರು |

ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನನಗೆ ಚಾಸಾ-1, 4, 5, ಇವರ ಪರಿಚಯ ಇಲ್ಲ. ಆರೋಪಿತರ ಪರಿಚಯ ಇಲ್ಲ. ನಾನು ಸುಮಾರು 2 ವರ್ಷಗಳ ಹಿಂದೆ ನಮ್ಮ ರೈಸ್ ಮಿಲ್ ಗೆ ಹೋಗುತ್ತಿದ್ದಾಗ, ದಾರಿಯ ಪಕ್ಕದಲ್ಲಿ ಇದ್ದ ಹಸ್ತಪಡ್ವು ಮೈದಾನದಲ್ಲಿ ಇದ್ದ ಪೊಲೀಸರು ನನ್ನನ್ನು ಕರೆದು ನನ್ನ ಸಹಿ ಪಡೆದಿದ್ದರು. ಯಾವ ಕಾರಣಕ್ಕೆ ಎಂದು ಗೊತ್ತಿಲ್ಲ. ನನ್ನ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ. ನನಗೆ ಈಗ ತೋರಿಸಿದ ನಿಪಿ-1 ರಲ್ಲಿರುವ ನನ್ನ ಸಹಿ ನಿಪಿ-1(ಬಿ) ಆಗಿದೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಆಗ ನನ್ನೊಂದಿಗೆ ಅಲ್ಲಿಯೇ ಇದ್ದ ಚಾಸಾ-7 ಸಹ ಸಹಿ ಮಾಡಿದ್ದರು. ನನಗೆ ಈಗ ತೋರಿಸಿದಇನ್ನೊಂದು ಸಹಿಯನ್ನು ಅದೇ ದಿನ ಅಲ್ಲಿಯೇ ಮಾಡಿದ್ದೆ, ಅದು ಯಾವ ಕಾರಣಕ್ಕೆ ಎಂದು ಗೊತಿತಲ್ಲ, ಸದರಿ ಸಹಿ ಇರುವ ದಾಖಲೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-6,** ಸಹಿಯನ್ನು ನಿಪಿ-6(ಎ) ಎಂದು ಗುರುತಿಸಿದ್ದೇನೆ. ಆ ಸಮಯದಲ್ಲಿ ಪೊಲೀಸರು ನಿಶಾನೆ ಪಿ-3 ರ ಪೋಟೋ ಸಹ ತೆಗೆದಿದ್ದರು.ಆ ಪೋಟೋಗಳನ್ನು ಯಾವ ಕಾರಣಕ್ಕೆ ತೆಗೆದಿದ್ದರು ಎಂದು ಗೊತ್ತಿಲ್ಲ.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರಕಾರಿ ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲು: ಸರಕಾರಿ ಅಭಿಯೋಜಕರಿಂದ:**

1) ಆರೋಪಿತರು ಚಾಸಾ-1, 4, 5, ಇವರಿಗೆ ಹಲ್ಲೆ ಮಾಡಿದ್ದರು ಎಂಬ ಕಾರಣಕ್ಕಾಗಿ ಪೊಲೀಸರು ತಾರೀಕು 20-06-2023 ರಂದು ಪಂಚನಾಮೆ ಬಂದಿದ್ದರು ಎಂದರೆ ಗೊತ್ತಿಲ್ಲ. ಅದಕ್ಕಾಗಿ ಅಲ್ಲಿಯೇ ಇದ್ದ ಚಾಸಾ-2 ಜಾಗೆ ತೋರಿಸಿದ್ದರು ಎಂದರೆ ಸರಿಯಲ್ಲ. ನಾನು ಪಂಚನಾಮೆ ನಡೆಯುವಾಗ, ಅಲ್ಲಿಯೇ ಇದ್ದು, ಅದನ್ನು ತಿಳಿದುಕೊಂಡು ನಂತರ, ನಿಪಿ-1 ಕ್ಕೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಅಲ್ಲಿಯೇ ನಿಪಿ-6 ರ ನಕಾಶೆಯನ್ನು ಬರೆದಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ-3 ರ ಪೋಟೋಗಳನ್ನು ತೆಗೆದಿದ್ದರು ಎಂದರೆ ನಿಜ.

2) ನನಗೆ ನಿಪಿ-1 ಮತ್ತು 6 ರಲ್ಲಿಇರುವ ವಿಷಯ ತಿಳಿದಿದ್ದರೂ ಸಹ, ಈಗ ಆರೋಪಿತರಿಗೆ ಸಹಾಯವಾಗಲೀ ಎಂದು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು: ಆರೋಪಿತರ ಪರವಾಗಿ ಶ್ರೀ ಎಸ್.ಎ. ವಕೀಲರಿಂದ ಇಲ್ಲ**

**ಮರು ವಿಚಾರಣೆ - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.